ದಿನಾಂಕ:26-07-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ :-**

ಚಾಸಾ-1, ಚಾಸಾ-2, ಚಾಸಾ-4 ಮತ್ತು ಚಾಸಾ-5 ನನಗೆ ಗೊತ್ತು. ನಮ್ಮ ಊರಿನ ಬಸವೇಶ್ವರ ಸ್ವಾಮಿ ಮತ್ತು ವರಲಕ್ಷ್ಮೀ ದೇವಿ ಜಾತ್ರೆ ಮಾಡುವ ವಿಚಾರದಲ್ಲಿ ನಾವು ಮತ್ತು ಊರಿನ ಮುಖಂಡರು ತಿಂಗಳೂರು ಗ್ರಾಮದ ಡೈರಿ ಮುಂಭಾಗದಲ್ಲಿ ಸುಮಾರು 1 ವರ್ಷಗಳ ಹಿಂದೆ ಸುಮಾರು ರಾತ್ರಿ 10:30 ಗಂಟೆಗೆ ಜಾತ್ರೆ ಬಗ್ಗೆ ಚರ್ಚಿಸುತ್ತಿದ್ದೆವು. ಅಷ್ಟರಲ್ಲಿ ಜಾಕಿ ಬಸ್ ಆ ಮಾರ್ಗದಲ್ಲಿ ಬಂತು, ಅದರ ಚಾಲಕ ಚಾಸಾ-16 ಬಸ್ ನಿಲ್ಲಿಸಿ ಸೋಲಾರ್ ಪಾರ್ಕ ಹತ್ತಿರ ರಸ್ತೆಯಲ್ಲಿ ಒಂದು ಹೆಣ ಅಪಘಾತವಾಗಿ ಬಿದ್ದಿದೆ ಎಂದು ಹೇಳಿದ. ಬಳಿಕ ನಾವು ಆ ಜಾಗಕ್ಕೆ ಹೋಗಿಲ್ಲ. ಮತ್ತೇನಾಯಿತೊ ಗೊತ್ತಿಲ್ಲ. ಅದು ಬಿಟ್ಟು ಬೇರೆ ಮಾಹಿತಿ ನನಗೆ ಗೊತ್ತಿಲ್ಲ. ಪೊಲೀಸರ ಮುಂದೆ ನಾನು ಹೇಳಿಕೆ ಮತ್ತು ಮರು ಹೇಳಿಕೆ ಕೊಟ್ಟಿಲ್ಲ. ಆರೋಪಿಗಳು ನನಗೆ ಯಾರು ಎಂದು ಗೊತ್ತಿಲ್ಲ. ಅವರ ಪರಿಚಯ ಇಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :-**

ಜಾಕಿ ಗಾರ್ಮೆಂಟ್ಸ ಬಸ್ ಚಾಲಕನ ಹೆಸರ ಸಂತೋಷ ಎಂದರೆ ನನಗೆ ಗೊತ್ತಿಲ್ಲ. ಅವನು ಹೆಣ ಬಿದ್ದಿದೆ ಎಂದು ಹೇಳಿದಾಗ ನಾನು, ಚಾಸಾ-1, ಚಾಸಾ-4 ಮತ್ತು ಚಾಸಾ-5 ಸೋಲಾರ್ ಪಾರ್ಕ ಬಳಿ ಅಲ್ಲಿ ಹೋಗಿ ನೋಡಿದಾಗ 25 ರಿಂದ 30 ವರ್ಷವಯಸ್ಸಿನ ಗಂಡಸು ರಸ್ತೆಯ ಮೇಲೆ ಬಿದ್ದಿದ್ದ ಅವನನ್ನು ಎತ್ತಿ ನೋಡಿದಾಗ ತಲೆಯ ಹಿಂಭಾಗ, ಮುಖ ಮತ್ತು ಕಿವಿಯ ಬಳಿ ರಕ್ತ ಗಾಯ ಆಗಿತ್ತು, ಕಿವಿ ಮತ್ತು ಮೂಗಿನಿಂದ ರಕ್ತ ಬರುತ್ತಿತ್ತು ಪಕ್ಕದಲ್ಲಿ ಒಂದು ದ್ವಿಚಕ್ರ ವಾಹನ ಬಿದ್ದಿತ್ತು ಅದರ ಹೆಡ್ ಲೈಟ್ ಮತ್ತು

ಇಂಡಿಕೇಟರ್ ಜಖಂ ಗೊಂಡಿತ್ತು ಎಂದರೆ ನಾನು ನೋಡಿಲ್ಲ. ತಕ್ಷಣ ನಾನು ಬಾಬು ಯಾವುದೋ ಒಂದು ವಾಹನದಲ್ಲಿ ಅವನನ್ನು ಮಧುಗಿರಿ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿ ಕೊಟ್ಟೆವು ಎಂದರೆ ಸರಿಯಲ್ಲ. ಮಾರ್ಗ ಮಧ್ಯೆ ಎ.ಎಸ್.ಐ ಸಾಕ್ಷಪ್ಪ ಸಿಕ್ಕಿ ಅವರು ಆ ವ್ಯಕ್ತಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು, ಅಲ್ಲಿ ಅವನು ಮೃತಪಟ್ಟಿರುವ ವಿಚಾರ ಗೊತ್ತಾಯಿತು ಎಂದರೆ ಸರಿಯಲ್ಲ. ಮೃತ ಪಟ್ಟ ವ್ಯಕ್ತಿಯ ಹೆಸರು ಜಯಣ್ಣನ ಮಗ ಸುದೀಪ ಎಂದು ಗೊತ್ತಾಯಿತು. ಇಷ್ಟು ವಿಚಾರ ನನಗೆ ಗೊತ್ತಿತ್ತು ಅದರಲ್ಲಿ ಪೊಲೀಸರ ಮುಂದೆ ಹೇಳಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ದಿನಾಂಕ:30-05-2022 ರ ಹೇಳಿಕೆಯನ್ನು ನಿರಾಕರಿಸಿದ ಕಾರಣ ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

ಬಳಿಕ ನನಗೆ ತಿಳಿದ ವಿಚಾರ ಏನೆಂದರೆ ಆರೋಪಿಗಳು ಮತ್ತು ಮೃತ ಸುದೀಪ ಸ್ನೇಹಿತರಾಗಿದ್ದರು ಅವರು ಮೊಲ ಭೇಟಿ ಆಡಲು ಹೋಗುತ್ತಿದ್ದರು ಆ ರೀತಿ ಭೇಟಿ ಆಡುವಾಗ ಜಗಳವಾಗಿ 1 ನೇ ಆರೋಪಿ ಚಲಪತಿ ನಾಡಬಂದೂಕಿನಿಂದ ಸುದೀಪನಿಗೆ ಹೊಡೆದು ಸಾಯಿಸಿದ್ದಾನೆ, ಆ ಕೃತ್ಯ ವನ್ನು ಮರೆ ಮಾಚಲು 1 ನೇ ಆರೋಪಿ ಮತ್ತು ಉಳಿದ ಇಬ್ಬರು ಆರೋಪಿಗಳು ಹೆಣವನ್ನು ರಸ್ತೆಯ ಮಧ್ಯ ತಂದು ಹಾಕಿ ಮೃತನ ದ್ವಿಚಕ್ರ ವಾಹನದ ಹೆಡ್ ಲೈಟ್ ಮತ್ತು ಇಂಡಿಕೇಟರ್ ಅನ್ನು ಜಖ್ಮ ಗೊಳಿಸಿ ರಸ್ತೆ ಅಪಘಾತದಲ್ಲಿ ತೀರಿಕೊಂಡ ಎಂದು ಬಿಂಬಿಸಲು ಪ್ರಯತ್ನಿಸಿ ಸಾಕ್ಷ್ಯ ನಾಶ ಮಾಡಿದ್ದಾರೆ ಎಂದು ಕೂಡ ಗೊತ್ತಾಯಿತು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ದಿನಾಂಕ:20-06-2022 ರಂದು ಪೊಲೀಸರ ಮುಂದೆ ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ದಿನಾಂಕ:20-06-2022 ರ ಮರು ಹೇಳಿಕೆಯನ್ನು ನಿರಾಕರಿಸಿದ ಕಾರಣ ಅದನ್ನು ನಿಪಿ-9 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಚಲಪತಿ ಮತ್ತು ಅವನ ಸ್ನೇಹಿತರಿಸಿ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು ಶ್ರೀ.PCKR ವಕೀಲರಿಂದ ಆರೋಪಿ ಪರವಾಗಿ:-</u>**

ಪಾಟೀಸವಾಲು ಇಲ್ಲ ಎಂದು ನುಡಿಯುತ್ತಾರೆ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**